# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

## 9 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆ

**ಸಮಯ : 1.30 ಗಂಟೆಗಳು** **ಗರಿಷ್ಠ ಅಂಕಗಳು : 40**

**ಕೊಟ್ಟಿರುವ ಪ್ರತಿಪ್ರಶ್ನೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿಯುತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 4*1=4**

1. ಇವುಗಳಲ್ಲಿ ಕನ್ನಡದ ಆದೇಶ ಸಂಧಿಗೆ ಉದಾಹರಣೆಯಾದ ಪದವಿದು;
   (ಅ) ನಿನಗಾಗಿ (ಆ) ನನಗೋಸ್ಕರ (ಇ) ಬಣ್ಣಗೆಟ್ಟಿತು (ಈ) ಅವನಿಗಾಗಿ
2. 'ನಾಲ್ಮೊಗ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;
   (ಅ) ಬಹುವ್ರೀಹಿ (ಆ) ಕರ್ಮಧಾರಯ (ಇ) ತತ್ಪುರುಷ (ಈ) ದ್ವಂದ್ವ
3. 'ವಂಶೋತ್ತಮ' ಪದದಲ್ಲಿ ಆಗಿರುವ ಸಂಧಿಯಿದು;
   (ಅ) ಸವರ್ಣದೀರ್ಘ (ಆ) ಗುಣ (ಇ) ವೃದ್ಧಿ (ಈ) ಜಶ್ತ್ವ
4. 'ರಸ್ತೆಗಳಲ್ಲಿ' ಪದದಲ್ಲಿರುವ ವಿಭಕ್ತಿಯ ಹೆಸರು;
   (ಅ) ಪ್ರಥಮಾ (ಆ) ದ್ವಿತೀಯಾ (ಇ) ಪಂಚಮೀ (ಈ) ಸಪ್ತಮೀ

**ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ. 4*1 = 4**

5. ವ್ರಜ : ಸಮೂಹ : : ಸ್ರಜ : ______________
6. ಶೃಂಗಾರ : ತತ್ಸಮ : : ಬಣ್ಣ : __________________
7. ಸಮಾನತೆ : ಅಸಮಾನತೆ : : ಭಯ : _______________
8. ಸಾಂಗತ್ಯ : ನಾಲ್ಕು ಸಾಲು : : ಕಂದಪದ್ಯ : _________________

**ಕೊಟ್ಟಿರುವ ಪ್ರತಿಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. 7*1=7**

9. ಅಮಾತ್ಯರು ಯಾವ ವಿಷಯದಲ್ಲಿ ನಿಪುಣರಾಗಿರಬೇಕು?
10. ಬಿ. ಜಿ. ಎಲ್. ಸ್ವಾಮಿ ಅವರು ನುಡಿಸುತ್ತಿದ್ದ ವಾದ್ಯ ಯಾವುದು?
11. ರಾಧಾಕೃಷ್ಣನ್ ಅವರ ಜನ್ಮ ದಿನವನ್ನು ಯಾವ ಹೆಸರಿನಿಂದ ಆಚರಿಸಲಾಗುತ್ತಿದೆ?
12. ಕವಿ ಕಯ್ಯಾರ ಕಿಞ್ಞಣ್ಣ ರೈ ಪ್ರಕಾರ ಹಾಡು ನುಡಿಗುಂಡುಗಳು ಹಾರಿ ಯಾವುದರ ಬೆನ್ನಟ್ಟಬೇಕು?
13. ಕವಿ ರತ್ನಾಕರವರ್ಣಿ ಅವರ ಕಾಲ ಮತ್ತು ಸ್ಥಳ ತಿಳಿಸಿ.
14. ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು?
15. ಅಭಯರುಚಿಯ ಸಹೋದರಿಯ ಹೆಸರೇನು?

**ಕೊಟ್ಟಿರುವ ಪ್ರತಿಪ್ರಶ್ನೆಗೂ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ. 5*2=10**

16. ಸೇವಕರ ವಿಷಯದಲ್ಲಿ ರಾಜನು ಹೇಗೆ ವರ್ತಿಸಬೇಕು?
17. ಬಿ. ಜಿ. ಎಲ್. ಸ್ವಾಮಿ ಅವರ ಸಂಶೋಧನೆಯ ಆಸಕ್ತಿ ಹೇಗಿತ್ತು?
18. ಬೇರೆಬೇರೆ ಭಾಷಿಕರು ತನ್ನ ಕೃತಿಯನ್ನು ಹೇಗೆ ಹೊಗಳಬೇಕೆಂದು ಕವಿ ಬಯಸುವನು?
19. ರಂಗರಾವ್ ಅವರು ಮಗಳ ಹೆಸರನ್ನು ಪಂಡರೀಬಾಯಿ ಎಂದು ಬದಲಾಯಿಸಲು ಕಾರಣವೇನು?
20. ಲಾಂಚು ಹೊಳೆಯ ದಡಕ್ಕೆ ಬಂದು ನಿಂತಾಗ ಜನರ ಗಡಿಬಿಡಿ ಹೇಗಿರುತ್ತದೆ?

**ಕೊಟ್ಟಿರುವ ಪ್ರತಿಹೇಳಿಕೆಯನ್ನೂ ಸಂದರ್ಭದೊಡನೆ ವಿವರಿಸಿರಿ. 2*2=4**

21. "ಮಾನವವತೆಯೇ ವಿಶ್ವ ಅನುಸರಿಸಬೇಕಾದ ಮಾರ್ಗ"
22. "ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ"

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1*2=2**

23. ನವಭಾವ ______________________
______________________
______________________
____________ ಧ್ವನಿಯೇರಬೇಕು;

ಅಥವಾ

ಜಾತಿ–ಕುಲ ______________________
______________________
______________________
____________ ಗುಡುಗಬೇಕು;

**ಕೊಟ್ಟಿರುವ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.** **1*2=2**

24. ಪ್ರಜೆಯೆಲ್ಲಂ ಜಲಗಂಧ
ಸ್ರಜ ತಂಡುಲ ಧೂಪ ದೀಪ ಚರು ತಾಂಬೂಲ ।
ವ್ರಜದಿಂ ಪೂಜಿಸುವುದು ಜೀ
ವಜಾತದಿಂದೆನಗೆ ಬಲಿಯನಿತ್ತೊಡೆ ಮುನಿವೆಂ ॥

**ಕೊಟ್ಟಿರುವ ಪ್ರಶ್ನೆಗಳಲ್ಲಿ ಯಾವುದಾದರೂ ಒಂದಕ್ಕೆ ಸುಮಾರು ಆರು/ಏಳು ವಾಕ್ಯಗಳಲ್ಲಿ ಉತ್ತರಿಸಿರಿ.** **1*3=3**

25. * ಅಂಬೇರ ಬೆಟ್ಟದ ಮೂರು ಅಂತಸ್ತಿನ ಅರಮನೆಯ ಒಳಾಂಗಣ ಚೆಲುವನ್ನು ವಿವರಿಸಿ.
* ಜಂತ್ರ ಮಂತ್ರದ ವಿಶೇಷತೆಯನ್ನು ಪರಿಚಯ ಮಾಡಿಕೊಡಿ.

**26. ನಿಮ್ಮ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸುವಂತೆ ಕೋರಿ ಶಾಸಕರಿಗೆ ಪತ್ರವನ್ನು ಬರೆಯಿರಿ. 1*4=4**

**ಅಥವಾ**

**ಕೊಟ್ಟಿರುವ ಯಾವುದಾದರೂ ಒಂದು ವಿಷಯವನ್ನು ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.**

* ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಯಲ್ಲಿ ವಿದ್ಯಾರ್ಥಿಗಳ ಪಾತ್ರ
* ಪ್ಲಾಸ್ಟಿಕ್ ಬಳಕೆಯನ್ನು ತಡೆಯುವಲ್ಲಿ ವಿದ್ಯಾರ್ಥಿಗಳ ಪಾತ್ರ